ಬೇಸಿಗೆಯಲ್ಲಿ ಈಜಿ ಬರುವ ನೆಪದಲ್ಲಿ ಹೊಳೆಗೆ ಹೋಗಿ ಬಟ್ಟೆ ಒಗೆಯಲು ಬಂದ ಹರೆಯದ ಹುಡುಗಿಯರ ಒದ್ದೆಮೈ, ಬೆತ್ತಲ ಕಾಲುಗಳನ್ನು ನೋಡಿ ಖುಷಿ ಪಡುವುದು. ನಡುವೆ ಐತಾಳರ ಹೋಟೆಲಿನಲ್ಲಿ ಸಾಲದ ಮೇಲೆ ಸೆಟ್ ದೋಸೆ, ಕಾಫಿ, ಸುಗ್ಗಿಯಲ್ಲಿ ಅಪ್ಪಂದಿರ ಕೃಪೆಯಿಂದ ಕೈಗೆ ನಾಲ್ಕು ಕಾಸು ಬಂದರೆ ಹಾಜೀ ಕರೀಮನ ಬೀಡಿ ಅಂಗಡಿಯ ಹಿಂದನ ಕಳ್ಳ ಬಕೆಟ್ ಷಾಪ್‌ನಲ್ಲಿ ಕುದುರೆ ಬಾಲಕ್ಕೆ ಬೆಟ್ ಕಟ್ಟುವುದು. ರಾತ್ರಿ ಹನ್ನೆರಡರವರೆಗೆ ಯಾರಾದರೂ ವಿಧವೆ ಮಕ್ಕಳ ಅಟ್ಟದ ಮೇಲೆ ಇಪ್ಪತ್ತೆಂಟರ ಇಸ್ಪೀಟ್ ಆಟ. ಆಗ ಈಗ ಎಲ್ಲರೂ ದುಡ್ಡು ಹಾಕಿ, ಕದ್ದು ಬ್ರಾಂದಿ ತಂದು, ಎರಡೆರಡು ಗುಟುಕು ಹೀರುವುದು. ಕಾಲ ಬಂದಾಗ ಮದುವೆ, ಮಕ್ಕಳು. ಹೀಗೆಯೇ ನಡೆದಿತ್ತು ಊರ ಬ್ರಾಹ್ಮಣರ ಮಕ್ಕಳ ವೈಭವದ ಬದುಕು!

ಸೂರಿಯ ಉಗಮ ಸಹ ಇದೇ ಇಲ್ಲೇ ಆಗಿದ್ದರೂ ಅವನು ಹೆಚ್ಚು ಭಾಗ್ಯಶಾಲಿ. ಇಂಟರ್‌ತನಕ ಬಂದು, ಮುಂದೆ ಓದಲಾಗದೆ, ಆದರೂ ಎಂದಾದರೂ ಬಿ.ಎ. ಮಾಡಿಯೇ ತೀರುವೆನೆಂಬ ಕನಸು ಕಟ್ಟಿಕೊಂಡು, ಸದ್ಯಕ್ಕೆ ಗೈಡ್ ಕಸುಬಿಗೆ ಇಳಿದಿದ್ದ. ಅದರಲ್ಲಿ ಸಂಪಾದನೆಯೂ ಚೆನ್ನಾಗಿ ಇತ್ತು.

ಸೂರಿ ಏನೇ ಮಾಡಲಿ ಶಿಸ್ತಾಗಿ ಮಾಡುತ್ತಿದ್ದ. ಅವನು ಇಂಟರ್ ಓದಿದ್ದು ಸಹ ಅದೇ ವರ್ಷ ಮೈಸೂರಿನಲ್ಲಿ ಶುರುವಾಗಿದ್ದ ಒಂದು ಕ್ರಿಶ್ಚಿಯನ್ ಕಾಲೇಜಿನಲ್ಲಿ. ಮೇಲೆ ಉದ್ದಕ್ಕೂ ಇಂಗ್ಲಿಷ್ ಮೀಡಿಯಮ್, ಕಾಲೇಜಿಗೆ ಒಬ್ಬ ಬ್ರಿಟಿಷ್ ಪ್ರಿನ್ಸಿಪಾಲ್, ಇಂಗ್ಲಿಷ್ ಪಾಠ ಹೇಳುತ್ತಿದ್ದವನು ಜರ್ಮನಿಯಿಂದ ತಲೆ ಉಳಿಸಿಕೊಂಡು ಬಂದಿದ್ದ ಒಬ್ಬ ಜರ್ಮನ್ ಜ್ಯೂ ಯಹೂದಿ. ತರಗತಿಯಲ್ಲಿ ಕೋ–ಎಜುಕೇಷನ್, ಆಂಗ್ಲೊ–ಇಂಡಿಯನ್ ಮತ್ತು ದೇಸೀ ಕರಿಯ ಕ್ರಿಶ್ಚಿಯನ್ ಹುಡುಗಿಯರು. ಜೇಬಲ್ಲಿ 'ಇಂಗ್ಲಿಷ್ ಸ್ಪೀಕ್ ಈಸಿ' ಇಟ್ಟುಕೊಂಡು ಅರ್ಥ, ವ್ಯಾಕರಣ, ಉಚ್ಚಾರಣೆಗಳ ಮುಂಡ ಮೋಚಿದರೂ, ಅವರೆಲ್ಲರೊಂದಿಗೆ 'ಓ', 'ಥೂ' ಎಂದು ಇಂಗ್ಲಿಷಿನಲ್ಲೇ ಮಾತಾಡುತ್ತ, ತನ್ನದಲ್ಲದ ಆ ಭಾಷೆಯಲ್ಲಿ ಎತ್ತು ಉಚ್ಚೆ ಹುಯ್ದಂತೆ ಹತ್ತಿಪ್ಪತ್ತು ನಿಮಿಷ ನಿರರ್ಗಳವಾಗಿ ಬಡಬಡಿಸುವ ಕಲೆಯನ್ನು ದಕ್ಕಿಸಿಕೊಂಡಿದ್ದ ಸೂರಿ, ಮುಂದೆ ಗೈಡ್ ಆಗಲು ಹುರುಪು ದೊರೆತದ್ದೂ ಇಂಗ್ಲಿಷ್ ಭಾಷೆಯ ಮೇಲಿನ ಈ ಪ್ರಭುತ್ವದಿಂದಲೇ, ಎಂದಾದರೂ ಬಿ.ಎ. ಮಾಡುವ ಆಸೆಗೆ ಅದೇ ಮೂಲ.

## 2

ಅವೊತ್ತು ಸೂರಿ ದಿನದ ಹೊತ್ತಿಗೆ ಎದ್ದು ಮುಖಮಾರ್ಜನ ಮುಗಿಸಿ ಅಡಿಗೆ ಮನೆಯಲ್ಲಿ ಅಮ್ಮನ ಜತೆ ಕಾಫಿ ಕುಡಿಯುತ್ತ ಗುತ್ತಿಗೆ, ಬಡ್ಡಿ ಮುಂತಾದ ಮನೆಯ ವ್ಯವಹಾರಗಳ ವಿಷಯ ಚರ್ಚಿಸುತ್ತ ಕೂತ. ಮನೆಯಲ್ಲಿ ಇದ್ದವರು ತಾಯಿಮಗ ಇಬ್ಬರೇ. ತಂದೆ ತೀರಿಕೊಂಡು ಎಷ್ಟೋ ವರ್ಷಗಳಾಗಿದ್ದವು. ಅಪ್ಪ ಬದುಕಿದ್ದಾಗ ಕೈಲಿದ್ದ ಸಾವಿರ ರೂಪಾಯಿಯನ್ನೇ ಲೇವಾದೇವಿಗೆ ತೊಡಗಿಸಿ, ಅವರು ಸಾಯುವ ಹೊತ್ತಿಗೆ ಸರಳಬಡ್ಡಿ, ಚಕ್ರಬಡ್ಡಿಗಳೆಲ್ಲ ಸೇರಿ, ಹತ್ತಾರು ಪಟ್ಟು ಬೆಳೆದು ಅದು ದಪ್ಪ ಗಂಟಾಗಿತ್ತು. ಸೂರಿ ವಯಸ್ಸಿಗೆ ಬಂದ ಮೇಲೆ 'ಥೂ! ಪಾಪದ ವ್ಯವಹಾರ' ಎಂದು ಲೇವಾದೇವಿ ನಿಲ್ಲಿಸಿ, ಇದ್ದ ಗಂಟನ್ನು ಸೊಸೈಟಿಯಲ್ಲಿ ಧರ್ಮದ ಬಡ್ಡಿಗೆ ಹಾಕಿದ್ದ. ಹಾಗೆ ನೋಡಿದರೆ ಸೂರಿ ಊರಿನ ಭಾರೀ ಕುಳವಲ್ಲವಾದರೂ ಜುಜುಬಿಯೂ ಅಲ್ಲ. ಊರಲ್ಲಿ ಅವನಿಗೆ ಮರ್ಯಾದೆಯಿದ್ದದ್ದು ಆ ಕಾರಣಕ್ಕಾಗಿಯೋ, ಇಲ್ಲವೇ ಇಂಗ್ಲಿಷ್ ಭಾಷೆಯ ಮೇಲಿನ ಅವನ ಅಧಿಕಾರಕ್ಕೊ ಎಂದು ಹೇಳುವುದು ಕಷ್ಟ.

ಸೂರಿ ಕಾಫಿ ಮುಗಿಸಿ ಮಹಡಿಯ ಮೇಲಿನ ಕೋಣೆಗೆ ಬಂದ. ಸೆಪ್ಟೆಂಬರ್ ತಿಂಗಳು. ವರ್ಷದ ದೊಡ್ಡ ಮಳೆ ಮುಗಿದು ಬಿಸಿಲು ಹಿತಮಿತವಾಗಿತ್ತು. ಆ ಕಾರಣವೊ ಅಥವಾ ಅವನಿಗೆ ತಿಳಿಯದ ಬೇರೆ ಯಾವುದಾದರೂ ಅವ್ಯಕ್ತವೊ ಅವತ್ತು ಸೂರಿ ಒಳ್ಳೆಯ 'ಮೂಡಿ'ನಲ್ಲಿದ್ದ. ಅವನಿಗೆ ಅರಿವಿಲ್ಲದೆಯೇ ಅವನ ಬಾಯಿಂದ ಹಿಂದೆಂದೋ ಊರಿನ ಟೆಂಟ್ ಸಿನಿಮಾದಲ್ಲಿ ನೋಡಿದ್ದ 'ಬಂಧನ್' ದೊ,